ಕರ್ನಾಟಕ ಸರ್ಕಾರ

# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

**ಪ್ರೊ. ಟಿ.ಡಿ. ಕೆಂಪರಾಜು**
ಕುಲಪತಿಗಳು

ಶ್ರೀ ದೇವರಾಜ್ ಅರಸ್ ಬಡಾವಣೆ
ಟಮಕ, ಕೋಲಾರ – 563 103
ದೂರವಾಣಿ : +91 8152 243150
+91 8152 243151
ಇ-ಮೇಲ್: vc@bnu.ac.in

ಸಂಖ್ಯೆ: ಬೆಂ.ಉ.ವಿ.ವಿ/ಪ್ರಾಂ/ಮೌಲ್ಯಮಾಪನ/188/2018-19

ದಿನಾಂಕ: 04.07.2019

**ವಿಷಯ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಪ್ರಥಮ ಪದವಿ ಎರಡನೇ ಸೆಮಿಸ್ಟರ್‌ನ ಇಂಗ್ಲೀಷ್ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಅಧ್ಯಾಪಕರನ್ನು ಕಳುಹಿಸಿಕೊಡುವ ಬಗ್ಗೆ.**

* * *

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತಿಳಿಸುವುದೇನೆಂದರೆ, ಪ್ರಥಮ ವರ್ಷ ಎರಡನೇ ಸೆಮಿಸ್ಟರ್‌ನ ಪರೀಕ್ಷೆಯ ಇಂಗ್ಲೀಷ್ ಪತ್ರಿಕೆಯ ಮೌಲ್ಯಮಾಪನವನ್ನು ಹೊರತುಪಡಿಸಿ ಉಳಿದೆಲ್ಲಾ ವಿಷಯಗಳ ಮೌಲ್ಯಮಾಪನ ಕಾರ್ಯವು ಮುಗಿದಿದೆ ಎಂದು ಕುಲಸಚಿವರು (ಮೌ) ಇವರು ತಿಳಿಸಿರುತ್ತಾರೆ. ದಿನಾಂಕ 04.06.2019ರಂದು ನಡೆದ ಪ್ರಾಂಶುಪಾಲರ ಸಭೆಯಲ್ಲಿ ತಾವೆಲ್ಲರೂ ತಮ್ಮ ಕಾಲೇಜಿನಿಂದ ತಪ್ಪದೆ ಎಲ್ಲಾ ಇಂಗ್ಲೀಷ್ ಅಧ್ಯಾಪಕರನ್ನು ಮೌಲ್ಯಮಾಪನಕ್ಕೆ ಕಳುಹಿಸಿಕೊಡುವುದಾಗಿ ಒಪ್ಪಿ ತೀರ್ಮಾನಿಸಿರುತ್ತೀರಿ. ಆದರೆ ಬಹಳಷ್ಟು ಕಾಲೇಜುಗಳಿಂದ ಇಂಗ್ಲೀಷ್ ಅಧ್ಯಾಪಕರು ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಿಲ್ಲದಿರುವ ವಿಷಯವನ್ನು ಕುಲಸಚಿವರು (ಮೌ) ಇವರು ವರದಿ ನೀಡಿದ್ದು, ಇದರಿಂದ ಇಂಗ್ಲೀಷ್ ವಿಷಯದ ಮೌಲ್ಯಮಾಪನ ಕಾರ್ಯವು ಶೇಕಡ 40%ರಷ್ಟು ಮಾತ್ರ ಮುಗಿದಿರುವುದಾಗಿ ತಿಳಿದುಬಂದಿದೆ. ಆದ್ದರಿಂದ ನಿಗದಿತ ದಿನಾಂಕದೊಳಗೆ ಫಲಿತಾಂಶವನ್ನು ಪ್ರಕಟಿಸಲು ಸಾಧ್ಯವಾಗುವುದಿಲ್ಲ.

ಸರ್ಕಾರದ ಆದೇಶ ಮತ್ತು ಯುಜಿಸಿ ನಿಯಮಗಳ ಅನ್ವಯ ಮೌಲ್ಯಮಾಪನ ಕಾರ್ಯವು ಎಲ್ಲಾ ಅಧ್ಯಾಪಕರ ಆದ್ಯ ಕರ್ತವ್ಯ. ಈ ಹಿನ್ನಲೆಯಲ್ಲಿ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈ ಕೂಡಲೇ ತಮ್ಮ ಕಾಲೇಜಿನ ಎಲ್ಲಾ ಇಂಗ್ಲೀಷ್ ಅಧ್ಯಾಪಕರನ್ನು ಮೌಲ್ಯಮಾಪನ ಕಾರ್ಯಕ್ಕೆ ತಪ್ಪದೆ ಹಾಜರಾಗಲು ಕಳುಹಿಸಿಕೊಡಬೇಕೆಂದು ಕೋರಿಕೆ.

ಮುಂದುವರೆದು, ವಿಶ್ವವಿದ್ಯಾಲಯವು ಪರೀಕ್ಷಾ ಮೌಲ್ಯಮಾಪನ ಕಾರ್ಯಕ್ಕೆ ಅದ್ಯಾಪಕರನ್ನು ಕಳುಹಿಸದೆ ಇರುವ ಕಾಲೇಜುಗಳ ನಡವಳಿಕೆಯನ್ನು ಮತ್ತು ಮೌಲ್ಯಮಾಪನ ಕಾರ್ಯಕ್ಕೆ ಗೈರುಹಾಜರಿ ಆಗಿರುವ ಅಧ್ಯಾಪಕರ ನಡೆಯನ್ನು ಗಂಬೀರವಾಗಿ ಪರಿಗಣಿಸಿ, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ವರದಿಯನ್ನು ನೀಡಲಾಗುವುದು. ಜೊತೆಗೆ ವಿಶ್ವವಿದ್ಯಾಲಯವೂ ತನ್ನ ಕಾನೂನು ವ್ಯಾಪ್ತಿಯಲ್ಲಿ ಪರೀಕ್ಷಾ ಮೌಲ್ಯಮಾಪನದಲ್ಲಿ ಗೈರುಹಾಜರಾಗುವ ಅಧ್ಯಾಪಕರು ಮತ್ತು ಕರ್ತವ್ಯ ಲೋಪವೆಸಗುವ ಕಾಲೇಜುಗಳ ಮೇಲೆ ಈ ಕೆಳಕಂಡ ಕ್ರಮಕೈಗೊಳ್ಳಲು ತೀರ್ಮಾನಿಸಿದೆ.

1. ಇಂಗ್ಲೀಷ್ ಪತ್ರಿಕೆಯ ಮೌಲ್ಯಮಾಪನ ಕಾರ್ಯಕ್ಕೆ ಅಧ್ಯಾಪಕರನ್ನು ಕಳುಹಿಸಿಕೊಡದಿರುವ ವಿವಿಧ ಕಾಲೇಜುಗಳ ಫಲಿತಾಂಶವನ್ನು ತಡೆಹಿಡಿಯುವುದು.
2. ಇಂಗ್ಲೀಷ್ ಪತ್ರಿಕೆಯ ಮೌಲ್ಯಮಾಪನ ಕಾರ್ಯಕ್ಕೆ ಗೈರುಹಾಜರಾಗಿರುವ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳ ಅಧ್ಯಾಪಕರ ಪಟ್ಟಿಯನ್ನು ನಿಯಮಗಳ ರೀತಿ ಶಿಸ್ತು ಕ್ರಮಕೈಗೊಳ್ಳಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಕಳುಹಿಸಿಕೊಡುವುದು.

3. ಮೌಲ್ಯಮಾಪನ ಕಾರ್ಯಕ್ಕೆ ಅಧ್ಯಾಪಕರನ್ನು ಕಳುಹಿಸಿಕೊಡದೆ ಅಸಹಕಾರ ನೀತಿ ಅನುಸರಿಸುತ್ತಿರುವ ಅನುದಾನ ರಹಿತ ಕಾಲೇಜುಗಳ ಮುಂದಿನ ಯಾವುದೇ ಕೋರಿಕೆಗಳು ಅಂದರೆ ಹೆಚ್ಚುವರಿ ಕೋರ್ಸ್, ಹೆಚ್ಚುವರಿ ವಿದ್ಯಾರ್ಥಿಗಳ ಸಂಖ್ಯೆ, ಶಾಶ್ವತ ಸಂಯೋಜನೆ ಇತ್ಯಾದಿಗಳ ಕೋರಿಕೆಯನ್ನು ವಿಶ್ವವಿದ್ಯಾಲಯ ಪರಿಗಣಿಸಲಾಗುವುದಿಲ್ಲ ಮತ್ತು ಸೂಕ್ತ ಕ್ರಮಕ್ಕಾಗಿ ಸರ್ಕಾರಕ್ಕೆ ವರದಿ ನೀಡಲಾಗುವುದು.

ಕುಲಪತಿಗಳು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಕುಲಪತಿಗಳ ಕಾರ್ಯಾಲಯ
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕ, ಕೋಲಾರ - ಕರ್ನಾಟಕ - 563 103.

ಗೆ,

ಎಲ್ಲಾ ಪ್ರಾಂಶುಪಾಲರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳು
ಮತ್ತು ಕಾಲೇಜು ಶಿಕ್ಷಕರ ಗಮನಕ್ಕೆ.

ಪ್ರತಿಗಳು:

1. ಕುಲಸಚಿವರು, ಆಪ್ತ ಸಹಾಯಕರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563103.
2. ಕುಲಸಚಿವರ(ಮೌ), ಆಪ್ತ ಸಹಾಯಕರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563103.
3. ಕಛೇರಿ ಪ್ರತಿ.